**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 268/2021

**ಸಾಕ್ಷಿಯನ್ನು ದಿನಾಂಕ** 29.1.2026 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪ್ರಭಾಕರ ಸಿ | ಪಿ.ಡಬ್ಲ್ಯೂ-16 |
| ತಂದೆಯ/ಗಂಡನ ಹೆಸರು | : | ಚಿಕ್ಕಣ್ಣ | ಸಿ.ಡಬ್ಲ್ಯೂ-27 |
| ವಯಸ್ಸು | : | 53 | |
| ಉದ್ಯೋಗ | : | ಎ.ಎಸ್.ಐ, ಸೌತ್ ಡಿ.ವೈ.ಎಸ್.ಪಿ ಆಫೀಸ್, ಮೈಸೂರು | |
| ವಾಸ ಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಜನವರಿ 2016 ರಿಂದ ಆಗಸ್ಟ 2022 ವರೆಗೆ ಟಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ಮಾಡಿರುತ್ತೇನೆ. ಆ ಕಾಲಕ್ಕೆ ದಿನಾಂಕ 27.8.2021 ರಂದು ಕ್ರೈಂ ನಂ.290/2021 ರ ತನಿಖಾಧಿಕಾರಿ ಚಾಸ 30 ಇವರ ನಿರ್ದೇಶನದಂತೆ ಶವ ಮಹಜರ್ ಕಾಲಕ್ಕೆ ಮಹಜರನ್ನು ಬರೆದಿರುತ್ತೇನೆ. ಈಗ ನಾನು ನೋಡುತ್ತಿರುವ ನಿಪಿ12 ಆ ಮಹಜರ್ ಇರುತ್ತದೆ. ದಿನಾಂಕ 31.8.2021 ರಂದು ಚಾಸ 30 ರವರ ಜೊತೆ ಮೂಗೂರು ಗ್ರಾಮದ ಕಾಲುವೆ ಬಳಿ ಹೋಗಿ ಅಲ್ಲಿ ಆರೋಪಿಯು ಮೃತೆಯ ಮೊಬೈಲನ್ನು ಬೀಸಾಡಿದ್ದ ಸ್ಥಳ ಎಂದು ತೋರಿಸಿದ ಸ್ಥಳದಲ್ಲಿ ಮಹಜರ್ ಬರೆದಿರುತ್ತೇನೆ.

ಈಗ ನಾನು ನೋಡುತ್ತಿರುವ ನಿಪಿ13 ಆ ಮಹಜರ್ ಇರುತ್ತದೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ13 ಸಿ ಎಂದು ಗುರುತಿಸಿದೆ. ನಿಪಿ15 ರಿಂದ ನಿಪಿ21 ಪೋಟೋಗಳು ನಿಪಿ13 ಕಾಲಕ್ಕೆ ತೆಗೆದ ಪೋಟೋಗಳಿವೆ. ಅವುಗಳಲ್ಲಿ ನಾನು ಇದ್ದೇನೆ.

ಅದೇ ದಿನ ಆರೋಪಿ ಕೃತ್ಯದ ಸ್ಥಳವನ್ನು ತೋರಿಸುವುದಾಗಿ 39 ನೇ ಚಾನಲ್ ಕಾಲುವೆ ಏರಿ ಮೇಲೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದ್ದು, ಆ ಸ್ಥಳದಲ್ಲಿ ತನಿಖಾಧಿಕಾರಿ ಹೇಳಿದಂತೆ ನಾನು ಮಹಜರನ್ನು ಬರೆದಿರುತ್ತೇನೆ. ಈಗ ನಾನು ನೋಡುತ್ತಿರುವ ನಿಪಿ22 ಆ ಮಹಜರ್ ಇರುತ್ತದೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ22 ಸಿ ಎಂದು ಗುರುತಿಸಿದೆ. ನಿಪಿ24 ರಿಂದ 26 ಪೋಟೋಗಳು ಆ ಮಹಜರ್ ಕಾಲಕ್ಕೆ ತೆಗೆದ ಪೋಟೊಗಳಿವೆ. ನಿಪಿ22 ಮಹಜರ್ ಕಾಲಕ್ಕೆ ಮೃತೆಯ ಶವವನ್ನು ತುರುಕಿದ್ದ ಪೈಪನ್ನು ಆರೋಪಿ ತೋರಿಸಿದ್ದು ಆ ಬಗ್ಗೆ ಸಹ ನಿಪಿ22 ರಲ್ಲಿ ನಮೂದಿಸಿರುತ್ತೇನೆ.

ಅದೇ ದಿನ ಆರೋಪಿಯನ್ನು ಆತನ ಮನೆಗೆ ಕರೆದುಕೊಂಡು ಹೋಗಿ ಆರೋಪಿ ಹಾಜರುಪಡಿಸಿದ ಕೊಟ್ಟಿಗೆಯಲ್ಲಿದ್ದ ಒಂದು ಸೈಕಲ್ ಮತ್ತು ಅಟ್ಟದ ಮೇಲಿದ ಒಂದು ಎಲಕೊಂಟನ್ನು ಜಪ್ತಿ ಮಾಡಿದ್ದು ಆ ಬಗ್ಗೆ ಮಹಜರ್ ಮಾಡಲಾಗಿದೆ. ಈಗ ನಾನು ನೋಡುತ್ತಿರುವ ನಿಪಿ31 ಆ ಮಹಜರ್ ಇರುತ್ತದೆ. ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ31 ಸಿ ಎಂದು ಗುರುತಿಸಿದೆ. ನಿಪಿ32, 35 ರಿಂದ 37 ಪೋಟೋಗಳು ನಿಪಿ31 ಮಹಜರ್ ಕಾಲಕ್ಕೆ ತೆಗೆದ ಪೋಟೊಗಳಿವೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯೇ ಆ ದಿನ ತನಿಖಾಧಿಕಾರಿಯ ವಶದಲ್ಲಿದ್ದ ವ್ಯಕ್ತಿ ಇರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ  ಆರ್.ಇ ವಕೀಲರಿಂದಃ</u>**

ಆ ದಿನ ತನಿಖಾಧಿಕಾರಿ ತನಿಖೆಗೆ ಸಹಕರಿಸುವಂತೆ ಮೌಖಿಕವಾಗಿ ತಿಳಿಸಿದ್ದರು, ಆ ಬಗ್ಗೆ ಲಿಖಿತವಾಗಿ ಆದೇಶ ಮಾಡಿಲ್ಲ.  ನಿಪಿ 15 ರಿಂದ 21 ಹಾಗೂ 24 ರಿಂದ 26 ಫೋಟೋಗಳಲ್ಲಿ ದಿನಾಂಕ ಮತ್ತು ಸಮಯ ನಮೂದಿಲ್ಲ ಎಂದರೆ ನಿಜ.  ನಾನು ಠಾಣೆಯಲ್ಲಿಯೇ ನಿಪಿ12, 13, 22 ಮತ್ತು 31 ದಾಖಲೆಗಳನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.  ತನಿಖಾಧಿಕಾರಿಗೆ ಸಹಯ ಮಾಡಲು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಿನಾಂಕಗಳಂದು ನಾನು ಆ ಸ್ಥಳಕ್ಕೆ ಹೋಗಿಲ್ಲ ಮತ್ತು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು